

## ಮಂಗಳನತ್ತ ನೂರು ನಿರೀಕ್ಷೆ

‘ಮಂಗಳನತ್ತ ಮೂರು ಕಣ್ಣು’ (ಬಿ. ಆರ್. ಗುರುಪ್ರಸಾದ್, ಆ. 20) ಲೇಖನ ಮಾಹಿತಿಪೂರ್ಣವಾಗಿದೆ. ಈಗ ಮಂಗಳ ಗ್ರಹಕ್ಕೆ ಹಾರಿ ಬಿಟ್ಟಿರುವ ಮೂರೂ ನೌಕೆಗಳು, ಅದರಲ್ಲೂ ಮುಖ್ಯವಾಗಿ ಅಮೇರಿಕದ ‘ಪರ್ಸಿವೆರೆನ್ಸ್ ರೋಲರ್’ ತನಗೆ ವಹಿಸಿದ ಕೆಲಸಗಳನ್ನು ಯಶಸ್ವಿಯಾಗಿ ಮಾಡಿ ಮುಗಿಸಲಿ ಎಂದು ಹಾರೈಸೋಣ.

—ಬಿ.ಶೋಭಾ ಅರಸ್, ತೆಕ್ಕಟ್ಟೆ

ಮಂಗಳ ಗ್ರಹದ ಬೆನ್ನು ಹತ್ತಿದ ದೇಶಗಳ ಕುರಿತು ಸುಧಾ ಟೀಮ್ ಒಳ್ಳೆಯ ಲೇಖನ ಪ್ರಕಟಿಸಿದೆ. ಓದಿ ತುಂಬಾ ಖುಷಿ ಆಯಿತು. ಮಂಗಳನ ವಾತಾವರಣದ ಬಗ್ಗೆ ತಿಳಿದು ಸ್ವಲ್ಪ ವಿಚಿತ್ರ ಅನಿಸಿತು. ಭೂಮಿ ಮೇಲೆ 100 ಕೆ.ಜಿ. ಇದ್ದರೆ, ಅಲ್ಲಿ 38 ಕೆ.ಜಿ.! ಈ ವಿಷಯವನ್ನು ನನ್ನ ಡುಮ್ಮ ಗೆಳೆಯನಿಗೆ ಹೇಳಿದೆ. ಖುಷಿಪಟ್ಟ.

—ಸಾಗರ್ ಕೋಣೆಮನಿ



## ಮನಸೆಳೆದ ಮಹಾಕಾವ್ಯ

ಡಿ.ಎಸ್. ಲಿಂಗರಾಜು ಅವರ ‘ಗಡಿ ರಕ್ಷಣೆಯ ಮಹಾಕಾವ್ಯ’ (ಆ. 20) ಲೇಖನ ಸಮಯೋಚಿತ. ಯೋಧರ ಸಾಹಸೀ ಬದುಕು ರೋಮಾಂಚನ ಹುಟ್ಟಿಸುತ್ತದೆ. ಯೋಧರಿಗೆ ಗೌರವ ನೀಡುವುದು ಭಾರತೀಯರ ಪವಿತ್ರ ಕರ್ತವ್ಯ.

—ವೆಂಕಟೇಶ್, ದಾವಣಗೆರೆ

ಬಿಎಸ್‌ಎಫ್ ಗಡಿರಕ್ಷಣೆಯ ಮಹಾಕಾವ್ಯ ಲೇಖನದ ಒಂದೊಂದು ವಿವರಣೆಯೂ ಭಾರತ ಮಾತೆಯ ಕಿರೀಟಕ್ಕೆ ಹೊನ್ನಗರಿಯನ್ನು ಏರಿಸುವಂತಿದೆ.

—ಸುಮನಾ

74ನೇ ಸ್ವತಂತ್ರ ದಿನಾಚರಣೆಯ ಸಂದರ್ಭದಲ್ಲಿ ಬಿ.ಎಸ್.ಎಫ್. ಯೋಧರ ಕಾರ್ಯವೈಖರಿಯನ್ನು ಪ್ರಕಟಿಸಿದ್ದು ಸಮಯೋಚಿತವಾಗಿದೆ.

—ಜನೆಟ್ ವತ್ಸಲ, ಕೋಲಾರ

ತಮ್ಮ ಜೀವವನ್ನು ಒತ್ತೆ ಇಟ್ಟು ಹಗಲಿರುಳು ದೇಶ ಕಾಯುವ ಯೋಧರಿಗೆ ಎಷ್ಟು ನಮನಗಳನ್ನು ಸಲ್ಲಿಸಿದರೂ ಸಾಲದು. ದೇವರು ಅವರನ್ನು ಸದಾ ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

—ಚಲುವನಹಳ್ಳಿ ರಾಜಶೇಖರ್, ಹಾಸನ

## ಭಾವತೀವ್ರ ಕಥನ-ಕಲಾಕೃತಿ

ವಸುಂಧರಾ ಕದಲೂರು ಅವರ ‘ಎರಡು ತಪ್ಪುಗಳು’ ಕಥೆ (ಆ. 20) ಚೆನ್ನಾಗಿದೆ. ಭಾವು ಪತ್ತಾರರ ಚಿತ್ರವೂ ಭಾವತೀವ್ರ ಕಥಾಹಂದರಕ್ಕೆ ಸಂದರ್ಭಯೋಚಿತವೂ ಸುಂದರವೂ ಆಗಿದೆ. ವಸುಂಧರಾ ಅವರು ಬಳಸಿಕೊಂಡಿರುವ ಮಾತುಗಳು ಕಥಾಸಂದರ್ಭವನ್ನು ಅತಿ ಯಶಸ್ವಿಯಾಗಿ ನಿಭಾಯಿಸಿವೆ. ಇಡೀ ಸಂದರ್ಭದ ಭಾರದ ಹೊರೆಯನ್ನು ದ್ರೌಪದಿಯ ಉಚಿತ ಮಾತುಗಳಲ್ಲಿಯೂ, ಕುಂತಿಯ ಅಸಹಾಯಕ ಮೌನಸಮ್ಮತಿಯಲ್ಲಿಯೂ ತಿಳಿಸುತ್ತಾ ಹೆಣ್ಣಿನ ನಿಜ ಅಂತರ್ಯವನ್ನು ತೆರೆದಿಟ್ಟಂತೆ ಭಾಸವಾಯಿತು. ಆದರೂ ಮನದಲ್ಲಿ ಉಳಿದ ಒಂದೇ ಸಂಶಯವೆಂದರೆ, ‘ತುಂಬು ಸಭೆಯಲಿ ನಗ್ನಳಾದಾಗ’ ಅಥವಾ ‘ಹಾಗೆ ಬತ್ತಲು ನಿಂತವಳ ಮಾನ...’ ಮುಂತಾದ ವಾಕ್ಯಗಳು, ಲೇಖಿಕರು ದ್ರೌಪದಿಯ ಅಂತರಾಳ ಪ್ರಭಾವಯುತವಾಗಿ ಬಿಂಬಿಸಲು ಬಳಸಿಕೊಂಡವೇ ಅಥವಾ ಸಂಪೂರ್ಣ ಬತ್ತಲಾಗದಿದ್ದರೂ ಆಕೆಗೆ ಅಷ್ಟೇ ತೀವ್ರವಾದ ಅವಮಾನವಾದದ್ದನ್ನು ತಿಳಿಸಲು ಸೃಷ್ಟಿಸಿದ ಚಿತ್ರಣವೇ ಸ್ಪಷ್ಟವಾಗಲಿಲ್ಲ.

—ಅರವಿಂದ ಶಾಸ್ತ್ರಿ

## ಶಿಕ್ಷಣ ನೀತಿಗೆ ಬೆಳಕು

‘ರಾಷ್ಟ್ರೀಯ ಹೊಸ ಶಿಕ್ಷಣ ನೀತಿ’ ತೇಜಸ್ವಿ ಕಟ್ಟೀಮನಿ ಅವರ ಜೊತೆ ಪ್ರಮೋದ್ ಸಂದರ್ಶನ (ಆ. 20) ಗಮನ ಸೆಳೆಯಿತು. ಯಾವುದೇ ಹೊಸತು ಬರಲಿ, ಅದು ಅನುಷ್ಠಾನಕ್ಕೆ ಬರುವುದಕ್ಕೆ ಸಾಕಷ್ಟು ಚರ್ಚೆಗಳು, ಸಂಶಯಗಳು, ಸಾಧಕ ಬಾಧಕಗಳ ಬಗ್ಗೆ ನಿಲುವುಗಳು... ಹೀಗೆ ಎಲ್ಲವೂ ಇರುತ್ತವೆ. ಇಂತಹ ಸಂದರ್ಭಗಳಲ್ಲಿ ಸಂದೇಹಗಳಿಗೆ ಸೂಕ್ತ ರೀತಿಯಲ್ಲಿ ಉತ್ತರಗಳನ್ನು ಕೊಡುವುದರ ಮೂಲಕ ಕಟ್ಟೀಮನಿಯವರು ಹೊಸ ಶಿಕ್ಷಣ ನೀತಿಯನ್ನು ಸಮರ್ಥಿಸಿದ್ದಾರೆ.

—ಸುಬ್ಬಲಕ್ಷ್ಮಿ ಹೆಚ್.ಕೆ., ಕೋಲಾರ

ಸ್ವಾತಂತ್ರ್ಯಪೂರ್ವದಿಂದಲೂ ಬ್ರಿಟೀಷರ ಶಿಕ್ಷಣ ಕ್ರಮ–ನೀತಿಗಳನ್ನೇ ಬಳಸುತ್ತಾ ಬಂದಿರುವ ನಾವು ಶಿಕ್ಷಣವನ್ನು ಕೇವಲ ವೈಟ್ ಕಾಲರ್ ಜಾಬ್ ಮತ್ತು ಡಿಗ್ರಿಗಳನ್ನು ಉತ್ಪಾದಿಸುವ ಫ್ಯಾಕ್ಟರಿ ಮಾಡಿಕೊಂಡಿದ್ದೇವೆ; ಸಾಕ್ಷರ ನಿರುದ್ಯೋಗಿಗಳನ್ನು ಸೃಷ್ಟಿಸಿದ ಹೆಮ್ಮೆಯಲ್ಲಿ ಮುಳುಗಿದ್ದೇವೆ. ಔದ್ಯೋಗಿಕ ಜೀವನವೆಂದರೆ ಸ್ಪರ್ಧೆ ಅನಿವಾರ್ಯ ಎಂಬ ಭ್ರಮೆಯನ್ನು ಬಿತ್ತಿ ಒಟ್ಟು ಯುವ ಸಮುದಾಯವನ್ನು ಹತಾಶೆಯ ಕೂಪಕ್ಕೆ ತಳ್ಳುತ್ತಲೇ ಬಂದಿರುವ ನಮ್ಮ ಶಿಕ್ಷಣ ವ್ಯವಸ್ಥೆಗೆ ಹೊಸ ನೀತಿ ತರಲಿರುವ ಸಮಗ್ರ ಬದಲಾವಣೆ ಅಪೇಕ್ಷಣೀಯ.

—ಚನ್ನಬಸವ ಪುತ್ತೂರು ಎಂ.ಎ., ಚಿತ್ರದುರ್ಗ

## ಮಕ್ಕಳ ಲೋಕದ ಅನಾವರಣ

‘ಪಾಲನೆ ಪೋಷಣೆ’ ಮಾಲಿಕೆಯಲ್ಲಿ ಸ್ವಯಂಪ್ರಭಾ ಅವರು ಸಣ್ಣ ಮಕ್ಕಳಿಗೆ ಖರ್ಚು ವೆಚ್ಚ ಇಲ್ಲದೆ ಪ್ರಕೃತಿಯಲ್ಲಿ ಸಿಗುವ ವಸ್ತುಗಳಿಂದ ಪಾಠ ಕಲಿಸುವ ವಿಧಾನವನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ಕೃತಕ ಆಟಿಕೆಗಳು ಮಗುವಿಗೆ ಹೇಗೆ ದುಷ್ಪರಿಣಾಮವನ್ನು ಉಂಟುಮಾಡುತ್ತದೆ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ನನಗೂ ನಮ್ಮ ಮಕ್ಕಳ ಹಳೆಯ ನೆನಪುಗಳು ಬಂದುಹೋದವು.

—ಎನ್. ವೈದೇಹಿ, ಮೈಸೂರು

ಗಿಡ, ಮರ, ಹೂ, ಹಣ್ಣು ಕಾಯಿ ನೋಡಿ, ಮುಟ್ಟಿ ಕಲಿಯುವುದು ಒಳ್ಳೆಯ ಅಭ್ಯಾಸ. ಆಟಿಕೆಯೊಂದಿಗೆ ಆಡಲು ಮಕ್ಕಳಿಗೂ ಸಂತೋಷವಾಗುತ್ತದೆ. ಪ್ರಕೃತಿಯ ಮಡಿಲಲ್ಲಿ ಹಾಗೂ ಆಟಿಕೆಗಳೊಂದಿಗೆ ಕಲಿಯುವುದು ಬಹಳಷ್ಟಿರುತ್ತದೆ. ಇನ್ನೂ ಮುಖ್ಯವಾಗಿ ಅವರ ಮಾತೃಭಾಷೆಯಲ್ಲೇ ಕಲಿಸುವುದರಿಂದ ನೆನಪಿನಲ್ಲಿ ಉಳಿಯುತ್ತದೆ. ಅಂದಹಾಗೆ, ಲೇಖನದ ಜೊತೆಯಿರುವ ಚಿತ್ರದಲ್ಲಿ, ಮಗುವಿನ ಕೈಯಲ್ಲಿ ಇರುವುದು ನಿಜವಾದ ಹೂವೋ, ಅಥವಾ ಆಟಿಕೆಯೋ?

—ಜಯಲಕ್ಷ್ಮೀ ಉಪಾಧ್ಯಾಯ, ಕಂಚಾರ್ತಿ



## ಅಪರೂಪದ ಭಲೇ ಜೋಡಿ

ಗುರುರಾಜ ಎಸ್. ದಾವಣಗೆರೆ ಅವರ ‘ಬಲು ಅಪರೂಪ ಈ ಜೋಡಿ’ (ಆ. 20) ಲೇಖನದಲ್ಲಿನ ಮಿರಾಯ್ ಟೋವಮತ್ತು ಸೊಮೈಟಿ ರೊಬೋಟ್ ಜೋಡಿ ಆಕರ್ಷಕವಾಗಿದೆ. ಇಂತಹ ರೊಬೋಟ್‌ಗಳನ್ನು ಸೃಷ್ಟಿಸಿದ ಜಪಾನೀಯರ ತಂತ್ರಜ್ಞಾನಕ್ಕೆ ತಲೆತೂಗಲೇಬೇಕು. ಮಿರಾಯ್ ಟೋವ ಮತ್ತು ಸೊಮೈಟಿ ಜೋಡಿ, ಒಲಂಪಿಕ್ ಕ್ರೀಡಾಕೂಟದಲ್ಲಿ ತಮ್ಮ ಸಾಮರ್ಥ್ಯವನ್ನು ತೋರುವ ದಿನ ಬೇಗ ಬರಲಿ!

—ಪ್ರಭಾಪ್ರಸಾದ್

## ಖಾದಿ ಫ್ಯಾಷನ್

ಉಮಾ ಅನಂತ್ ಅವರ ‘ಖಾದಿ ಫ್ಯಾಷನ್’ (ಆ. 20) ಲೇಖನ ಓದಿ ಖುಷಿಯಾಯ್ತು. ಸ್ವದೇಶಿ ಉತ್ಪನ್ನಗಳ ಬಗ್ಗೆ ಈಗ ಎದ್ದಿರುವ ಭಾರಿ ಕೂಗಿನ ಹಿನ್ನೆಲೆಯಲ್ಲೇ, ‘ಖಾದಿ’ ಹೊಸರೂಪದಲ್ಲಿ ಸಿಂಗರಿಸಿಕೊಂಡು ಜನಮನ ಗೆಲ್ಲುತ್ತಿರುವುದು ಖುಷಿಯ ಸಂಗತಿ.

—ಅನಸೂಯ ತ್ರಿವಿಕ್ರಮ್, ಕೇದಿಗೆಮನೆ